

# ಮೋಡ ಬಿತ್ತನೆ ಯಶಸ್ವಿ! ಮಳೆ ಬರುವುದಷ್ಟೇ ಬಾಕಿ..

**ಹತ್ತು ವರ್ಷಗಳ ಹಿಂದೆ ಯೋಗರಾಜ ಭಟ್‌ರ 'ಮುಂಗಾರುಮಳೆ' ಮಾಡಿದ ಜಾದೂವನ್ನು ಶಶಾಂಕ್ ನಿರ್ದೇಶನದ 'ಮುಂಗಾರುಮಳೆ2' ಮರುಕಳಿಸೀತೆ?**



ಹತ್ತು ವರ್ಷಗಳ ಹಿಂದೆ 'ಮುಂಗಾರು ಮಳೆ' ಸಿನಿಮಾ ತೆರೆಕಂಡಾಗ, ಅದು ಕನ್ನಡ ಚಿತ್ರರಂಗದ ಬಹುಯಶಸ್ವಿ ಚಿತ್ರಗಳಲ್ಲೊಂದಾಗಬಹುದು ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಆ ಚಿತ್ರದ ಆರಂಭ ಕೂಡ ಉತ್ತಮವಾಗಿರಲಿಲ್ಲ. ಆದರೆ, ದಿನದಿಂದ ದಿನಕ್ಕೆ ಚೇತರಿಸಿಕೊಂಡ ಸಿನಿಮಾ, ಕನ್ನಡ ಚಿತ್ರೋದ್ಯಮಕ್ಕೆ ಗೆಲುವಿನ ಮಳೆಯಾಗಿ ಪರಿಣಮಿಸಿತು. ಯೋಗರಾಜ ಭಟ್, ಗಣೇಶ್ ಎನ್ನುವ ತಾರೆಗಳು ಹುಟ್ಟಿಕೊಂಡರು. ಜಯಂತ ಕಾಯ್ಕಿಣಿ ಅವರ ಕಾವ್ಯಗಂಧಿ ಗೀತೆಗಳು ಸಹೃದಯರಿಗೆ ಹುಚ್ಚು ಹಿಡಿಸಿದವು. ಈ ಮಾಯದ ಮಳೆ ಸುರಿದು ಹತ್ತು ವರ್ಷ ಸಂದಿರುವ ಸಂದರ್ಭದಲ್ಲಿ, ಮತ್ತೊಂದು ಮುಂಗಾರು ಮಳೆ ಚಿತ್ರಮಂದಿರಗಳ (ಸೆ. 9ರಂದು ತೆರೆಗೆ) ಹೊಸ್ತಿಲಲ್ಲಿದೆ.

'ಮುಂಗಾರು ಮಳೆ–2' ಶಶಾಂಕ್ ನಿರ್ದೇಶನದ ಸಿನಿಮಾ. ಯೋಗರಾಜ ಭಟ್‌ರಂತೆ ಶಶಾಂಕ್ ಕೂಡ ಸದಭಿರುಚಿಯ ಚಿತ್ರಗಳಿಗೆ ಹೆಸರಾದವರು. ಅವರ ನಿರ್ದೇಶನದ 'ಮೊಗ್ಗಿನ ಮನಸು', 'ಕೃಷ್ಣನ್ ಲವ್‌ಸ್ಟೋರಿ', 'ಜರಾಸಂಧ', 'ಕೃಷ್ಣಲೀಲಾ' ಚಿತ್ರಗಳು ತಮ್ಮ ವಿಭಿನ್ನ ಕಥನಗಳಿಂದ ಗೆಲುವು ಪಡೆದಿವೆ; ಚಿತ್ರರಸಿಕರ ಗಮನಸೆಳೆದಿವೆ. ಗಿಮಿಕ್‌ಗಳ ಬದಲು ಕಥೆಯನ್ನು ನೆಚ್ಚಿಕೊಂಡ, ನಿರ್ದೇಶಕನ ಸೃಜನಶೀಲತೆಯ ಬಗ್ಗೆ ಅಪಾರ ನೆಚ್ಚುಳ್ಳ ಶಶಾಂಕ್ ಇದೀಗ ಮತ್ತೊಬ್ಬ ನಿರ್ದೇಶಕರ ಚಿತ್ರದ ಹೆಸರನ್ನು ಬಳಸಿಕೊಂಡು ಪ್ರೇಕ್ಷಕರ ಎದುರು ಬರುತ್ತಿರುವುದು ಸೋಜಿಗವೂ ಹೌದು, ಸಾಹಸವೂ ಹೌದು.

'ಹೆಸರಷ್ಟೇ ಹಳೆಯದು, ಕಥನ ಈ ಕಾಲದ್ದು' ಎಂದು ಶಶಾಂಕ್ ಅವರೇನೋ ಹೇಳಿದ್ದಾರೆ. ಆದರೆ, ಹೀಗೆ ಹೇಳಿಬಿಟ್ಟ ಮಾತ್ರಕ್ಕೆ ಅವರಿಗೆ ಮುಂಗಡ ಜಾಮೀನು ದೊರೆಯುವುದಿಲ್ಲ. 'ಮುಂಗಾರು ಮಳೆ' ಎನ್ನುವ ಶೀರ್ಷಿಕೆಯೇ ನೋಡುಗರ ಮನಸ್ಸಿನಲ್ಲಿ ಭಾವುಕ ನೆನಪುಗಳನ್ನು ಉದ್ದೀಪಿಸುತ್ತದೆ. ಜೊತೆಗೆ, ಹಳೆಯ ಚಿತ್ರದ ನಾಯಕ ಗಣೇಶ್ ಮಳೆಯ ಹೊಸಋತುವಿನಲ್ಲೂ ಇದ್ದಾರೆ. ಹಾಗಾಗಿ, ತಲೆಯ ಮೇಲೊಂದು ಋಣಭಾರವನ್ನು ಇಟ್ಟುಕೊಂಡೇ ಶಶಾಂಕ್ ಪ್ರೇಕ್ಷಕರಿಗೆ ಮುಖಾಮುಖಿ ಆಗಬೇಕಿದೆ. ಹಳೆಯ ಸಿನಿಮಾವನ್ನು ಮರೆಸುವಂತೆ ತಮ್ಮ ಚಿತ್ರದ ಮೂಲಕ ಪ್ರೇಕ್ಷಕರನ್ನು ಮರುಳುಗೊಳಿಸಬೇಕಾಗಿದೆ. ಈ ಜಾದೂ ಸಾಧ್ಯವಾದೀತೆ ಎಂದು ಗಾಂಧಿನಗರ ಅರಳುಗಣ್ಣಿನಿಂದ ನೋಡುತ್ತಿದೆ.



ಸದ್ಯಕ್ಕೆ ಗಣೇಶ್ ಹಾಗೂ ಶಶಾಂಕ್ ಇಬ್ಬರ ನಿಕಟಪೂರ್ವ ಚಿತ್ರಗಳೂ ಗೆಲುವು ಕಂಡಿವೆ. ಶಶಾಂಕ್‌ರ 'ಕೃಷ್ಣಲೀಲಾ' ದೊಡ್ಡ ಯಶಸ್ಸು ಕಂಡಿದ್ದರೆ, ಗಣೇಶ್‌ರ 'ಜೂಮ್' ಐವತ್ತು ದಿನಗಳ ಪ್ರದರ್ಶನ ಕಂಡಿದೆ. ಈ ಯಶಸ್ಸಿನ ಹಿನ್ನೆಲೆ 'ಮುಂಗಾರುಮಳೆ–2' ಓಪನಿಂಗ್‌ಗೆ ನೆರವಾಗಲಿದೆ. ಇಷ್ಟು ಮಾತ್ರವಲ್ಲ – ಚಿತ್ರದ ಗೀತೆಗಳ ಬಗ್ಗೆ ಒಳ್ಳೆಯ ಮಾತುಗಳು ಕೇಳಿಬರುತ್ತಿರುವುದು ಕೂಡ ಚಿತ್ರತಂಡದ ನಿರೀಕ್ಷೆಗಳನ್ನು ಹೆಚ್ಚಿಸಿದೆ.

ಸ್ಟಾರ್‌ಗಳ ಸಿನಿಮಾ ಮಾಡಿದಾಗಲೆಲ್ಲ ಮಧ್ಯಮ ಯಶಸ್ಸು ಕಂಡಿರುವ ಶಶಾಂಕ್, ಅಷ್ಟೇನೂ ಪ್ರಸಿದ್ಧರಲ್ಲದವರನ್ನು ತೆರೆಯ ಮೇಲೆ ಕಾಣಿಸಿದಾಗಲೆಲ್ಲ ದೊಡ್ಡ ಗೆಲುವು ಕಂಡಿದ್ದಾರೆ. ಈ ಸಲ ಅವರು, ತಾರಾಗಿರಿ ಕೊಂಚ ಮಸುಕಾಗಿರುವ ಗಣೇಶ್‌ರನ್ನು ನೆಚ್ಚಿ ಮಳೆಯ ಜೊತೆ ಕಣ್ಣಾಮುಚ್ಚಾಲೆ ಆಡುತ್ತಿದ್ದಾರೆ. ದೊಡ್ಡ ಬಜೆಟ್, ಆಕರ್ಷಕ ತಾರಾಗಣ ಇವೆಲ್ಲವೂ 'ಮುಂಗಾರು ಮಳೆ2'ಕ್ಕೆ ವರ್ಣರಂಜಿತ ಆಯಾಮ ತಂದುಕೊಟ್ಟಿವೆ.

ಪ್ರೇಕ್ಷಕರ ಮನದಂಗಳದಲ್ಲಿ ಮೋಡಗಳನ್ನು ಬಿತ್ತುವ ಕೆಲಸವನ್ನೇನೋ ಶಶಾಂಕ್ ಯಶಸ್ವಿಯಾಗಿ ಮಾಡಿದ್ದಾರೆ. ಬಾಕಿ ಇರುವುದು ಮಳೆ ಸುರಿಯುವ ವಿಷಯವಷ್ಟೇ! ಲೆಕ್ಕಾಚಾರ ಹುಸಿಯಾಗದೆ ಮಳೆ ಸಮೃದ್ಧಿಯಾಗಿ ಸುರಿದಲ್ಲಿ, ಹತ್ತು ವರ್ಷಗಳ ಹಿಂದಿನ ಜಾದೂ ಮರುಕಳಿಸಬಹುದು.

■ ರಘು